ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)–

ಅ) ಉಡುಪಿ ಜಿಲ್ಲೆಯಲ್ಲಿರುವ ಹಿಂದುಳಿದ ಜನಾಂಗದವರಾದ ಕೊರಗ ಜನಾಂಗದವರಿಗೆ ಭೂಮಿ ಹಂಚಿಕೆ ಮಾಡಲು ಸರ್ಕಾರ ಪ್ರತ್ಯೇಕ ಆದೇಶ ಹೊರಡಿಸಿರುವುದಿಲ್ಲ. ಆದರೆ, ಉಡುಪಿ ಜಿಲ್ಲಾಧಿಕಾರಿಗಳು 2006–07ರ ಸಾಲಿನಲ್ಲಿ ಈ ಕೆಳಕಂಡ ತಾಲ್ಲೂಕುಗಳಲ್ಲಿ ಕೊರಗ ಜನಾಂಗದವರಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ 1969 ನಿಯಮ 7ರಂತೆ ಜಮೀನು ಮಂಜೂರು ಮಾಡಿರುತ್ತಾರೆ.

ಕ್ರ. ಸಂ.	ತಾಲ್ಲೂಕು	ಸಂಖ್ಯೆ	ವಿಸ್ತೀರ್ಣ ಎ:ಗುಂ
1	ಕಾರ್ಕಳ	14	14.97
2	ಕುಂದಾಪುರ	9	9.43
3	ಬ್ರಹ್ಮಾವರ	27	25.01
4	ಬೈಂದೂರು	2	2.34
	ಒಟ್ಟು	52	51:75

212 (301) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 12ನೇ ಹಣಕಾಸು ಯೋಜನೆಯ 2006-07 ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ಎಷ್ಟು (ಯೋಜನಾವಾರು ವಿವರ ನೀಡುವುದು) ;

ಆ) ಇನ್ನೂ ಹೆಚ್ಚು ಅನುದಾನ ಬಿಡುಗಡೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) 12ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ 2006–07ನೇ ಸಾಲಿನಲ್ಲಿ ರಾಜ್ಯ ಸರ್ಕಾರಕ್ಕೆ ಕೆಳಕಂಡ ಯೋಜನೆಗಳಿಗೆ ಲಭ್ಯವಾಗುವ ಮತ್ತು ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನಗಳ ವಿವರ ಈ ರೀತಿಯಿದೆ: ಈ ಸಾಲಿನಲ್ಲಿ ರಾಜ್ಯಕ್ಕೆ ಲಭ್ಯವಾಗುವ ರೂ.874.74 ಕೋಟಿಗಳ ಪೈಕಿ ಕೇಂದ್ರ ಸರ್ಕಾರದಿಂದ ಈವರೆಗೆ ರೂ.485.65 ಕೋಟಿಗಳು ಸ್ವೀಕೃತವಾಗಿರುತ್ತದೆ. ಇದರಲ್ಲಿ ರೂ. 423.63 ಕೋಟಿಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಯೋಜನೆಗಳ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಲಾಗಿದೆ.

(ಕೋಟಿ ರೂ.ಗಳಲ್ಲಿ)

ಯೋಜನೆ ಹೆಸರು	2006–07ನೇ ಸಾಲಿನಲ್ಲಿ 12ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ರಾಜ್ಯಕ್ಕೆ ಲಭ್ಯವಾಗುವ ಅನುದಾನ	ಕೇಂದ್ರ ಸರ್ಕಾರದಿಂದ ಈವರೆಗೆ ಬಿಡುಗಡೆಯಾಗಿರುವ ಅನುದಾನ
1. ರಸ್ತೆ ಮತ್ತು ಸೇತುವೆಗಳ ನಿರ್ವಹಣೆ	364.53	182.26
2. ಸಾರ್ವಜನಿಕ ಕಟ್ಟಡಗಳ ನಿರ್ವಹಣೆ	51.28	25.04
3. ಅರಣ್ಯಗಳ ನಿರ್ವಹಣೆ	11.00	5.50
4. ಪರಂಪರೆ ಸಂರಕ್ಷಣೆ	12.50	6.25
5. ಸಾಮಾನ್ಯ ಆಡಳಿತ, ವ್ಯಾನ್ ಮತ್ತು ತರಬೇತಿ ಸಂಸ್ಥೆಗಳ ಉನ್ನತೀಕರಣ	88.33	66.24
6. ಪೊಲೀಸ್ ಆಡಳಿತದ ಉನ್ನತೀಕರಣ	25.00	18.75
7. ಆರೋಗ್ಯ ಸೇವೆಗಳ ಉನ್ನತೀಕರಣ	54.90	41.16
8. ಯುವಜನ ಸೇವಾ ಮತ್ತು ಕ್ರೀಡೆ	25.00	18.75
9. ಸ್ಥಳೀಯ ಸಂಸ್ಥೆಗಳಿಗೆ ಅನುದಾನ (ಪಂಚಾಯತ್ ರಾಜ್ ಸಂಸ್ಥೆಗಳು)	177.60	88.80
10. ಸ್ಥಳೀಯ ಸಂಸ್ಥೆಗಳಿಗೆ ಅನುದಾನ (ನಗರ ಸ್ಥಳೀಯ ಸಂಸ್ಥೆಗಳು)	64.60	32.30
ಒಟ್ಟು	874.74	485.65

ಆ) 2006–07ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರೂ. 389.09 ಕೋಟಿ ಅನುದಾನ ಇನ್ನೂ ಬರಬೇಕಾಗಿದ್ದು, ಅದು ಸ್ವೀಕೃತವಾದ ಕೂಡಲೇ ಹಣಕಾಸು ಇಲಾಖೆಯು ಈ ಅನುದಾನವನ್ನು ಆಡಳಿತ ಇಲಾಖೆಗಳಿಗೆ ಬಿಡುಗಡೆ ಮಾಡುತ್ತದೆ.

213 (798) : ಶ್ರೀ ಜೀವಿಜಯ ಬಿ.ಎ. (ಸೋಮವಾರಪೇಟೆ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–